ಇನ್ನು ಒಂದೆರಡು ಬಾರಿ ಸ್ವತಃ ಪೊಲೀಸರೆ ವಠಾರಕ್ಕೆ ಬಂದು ಸ್ವಾಮಿಯನ್ನು ಯಾವುದೋ ಕಳ್ಳತನದ ಕೇಸಿನಲ್ಲಿ ಎತ್ತಿಕೊಂಡು ಹೋಗಿದ್ದು, ಒಂದೇ ವಾರದಲ್ಲಿ ಅವನು ಹೊರಬಂದು ಮೀಸೆ ತಿರುವಿದ ಘಟನೆಗಳು ನಡೆದ ಮೇಲಂತೂ ನಮ್ಮ ವಠಾರದ ಸ್ಟೇಟಸ್ಸು ಬದಲಾಗಿ, ಸ್ವಾಮಿ ಬಗೆಗಿನ ಗೌರವ ಭಯಗಳು ಇಮ್ಮಡಿಗೊಂಡಿದ್ದವು!

ಏನೇ ಅನ್ನಿ, ಮಾಮಿ ಕಳವು ಮಾಡುತ್ತಿದ್ದ ವಸ್ತುಗಳು ಎಲ್ಲಿ ಹೋಗುತ್ತವೆ ಎನ್ನುವ ರಹಸ್ಯ ಒಮ್ಮೆ ಅವಳ ಮನೆಗೆ ಕೆಲಸಕ್ಕೆಂದು ಬಂದ ರಾಜಿಯಿಂದ ತಿಳಿದಿತ್ತು. ಈಕೆ ಥೇಟ್ ರಾಬಿನ್ ಹುಡ್‌ನಂತೆ ವಠಾರದ ಮಕ್ಕಳ ಬಟ್ಟೆ ಬರೆ, ಆಟದ ಸಾಮಾನುಗಳನ್ನು ಕದ್ದು ತನ್ನ ಹಳ್ಳಿಯಲ್ಲಿದ್ದ ಕೇರಿಯ ಬಡ ಮಕ್ಕಳಿಗೆ ಹಂಚುತ್ತಿದ್ದಳಂತೆ! ಹಳ್ಳಿಯಲ್ಲಿ ಸುಭಗಳಂತೆ ಸೋಗು ಹಾಕಿ, ಕದ್ದ ಮಾಲಿನಿಂದ ಮಕ್ಕಳನ್ನು ಸಂತೋಷಗೊಳಿಸುವ ಆಕೆಯ ಕಳ್ಳ ಧರ್ಮ, ನೀತಿ (ಅನೀತಿ) ಸಂಹಿತೆ ನಮಗೆ ವಿಚಿತ್ರವೆನಿಸಿ ತರ್ಕಕ್ಕೆ ನಿಲುಕದಾಗಿತ್ತು.

ಎಡವಿ ಬಿದ್ದರೆ ಮಾರ್ಕೆಟ್ಟು, ದೇವಸ್ಥಾನ, ಕ್ಲಿನಿಕ್ಕು ಎಲ್ಲದಕ್ಕೂ ಅನುಕೂಲವಾಗಿದ್ದ ಮನೆಯನ್ನು ಸಣ್ಣ ಪುಟ್ಟ ಸಮಸ್ಯೆಗಳಿಗೆ ಹೆದರಿ ಬಿಡುವುದು ನಮಗೆ ಸಾಧ್ಯವಿರಲಿಲ್ಲ. ಇವೆಲ್ಲ ಒಂದು ಕಡೆಗಾದರೆ, ನಾವು ಅಕ್ಕ ಪಕ್ಕದ ಮನೆಯವರೆಲ್ಲ ಬಂಧುಗಳಂತೆ ಕಷ್ಟದಲ್ಲಿ ಭಾಗಿಯಾಗಿ ಒಗ್ಗಟ್ಟಿನಿಂದ ಹಬ್ಬ ಹರಿದಿನಗಳನ್ನಾಚರಿಸುತ್ತ, "ನಮ್ಮ ವಠಾರ ನಮ್ಮ ಹೆಮ್ಮೆ" ಎನ್ನುವ ಘೋಷ ವಾಕ್ಯದೊಂದಿಗೆ ಹಾಯಾಗಿದ್ದೆವು.

ನಾವು ಪಟ್ಟ ಪಾಡು ಈಗ ತಮಾಷೆಯ ಪ್ರಸಂಗವಾಗಿ ಕಂಡರೂ, ಆಗ ಪ್ರಜ್ಞಾಪೂರ್ವಕವಾಗಿ ಮಾಮಿ ಮಾಡಿದ ಅನಾಚಾರಗಳನ್ನು ಕ್ಷಮಿಸುವ ದೇವತಾ ಮನುಷ್ಯರು ನಾವಾಗಿರಲಿಲ್ಲ. ಭಗವಂತ ಅವಳಿಗೆ ಯಾವ ರೀತಿಯ ಶಿಕ್ಷೆ ವಿಧಿಸುತ್ತಾನೆ ಎಂಬುದನ್ನು ಕಾಯುವ ಕುತೂಹಲಿಗಳಾಗಿದ್ದೆವು.

'ನಿಮಿತ್ತ ಮಾತ್ರಂ ತವ ಸವ್ಯಸಾಚಿ' ಎನ್ನುವಂತೆ ಕೆಲ ವರ್ಷಗಳ ಬಳಿಕ ಮಾಮಿಯ ಎರಡೂ ಮಂಡಿ ಪೂರ್ಣ ಸವೆದು, ವಿಪರೀತ ನೋವು ಅನುಭವಿಸಿದಳು. ವೃದ್ಧಾಪ್ಯದಲ್ಲಾದರೂ ಆತ್ಮಾವಲೋಕನ ಮಾಡಿಕೊಂಡು ತನ್ನ ಕೆಟ್ಟ ಕೆಲಸಗಳಿಗೆ ಒಂದಿಷ್ಟಾದರೂ ಪಶ್ಚಾತ್ತಾಪ ಪಟ್ಟಿರಬಹುದೇ ಎನ್ನುವ ಪ್ರಶ್ನೆ ಈಗಲೂ ನನ್ನನ್ನು ಕಾಡುತ್ತದೆ. ಆಕೆಯ ಮಗ ಸ್ವಾಮಿ ಯಾವುದೊ ದರೋಡೆ ಪ್ರಕರಣದಲ್ಲಿ ಸಿಲುಕಿ, ಬೆಂಗಳೂರಿನ ಜೈಲಿನಲ್ಲಿ ಕಂಬಿ ಎಣಿಸುತ್ತಿದ್ದಾನೆ ಎನ್ನುವ ಸುದ್ದಿಯೂ ನಮ್ಮ ಕಿವಿಗೆ ಬಿದ್ದಿತ್ತು. ಮಾಡಿದ್ದರ ಪ್ರತಿಫಲವನ್ನು ಅವರವರೇ ಉಣ್ಣಬೇಕು ಎಂದು ಹಿರಿಯರು ಹೇಳುತ್ತಾರಲ್ಲ!

ಆಗಿನ ನಮ್ಮ ವಿಶಾಲ ವಠಾರವಿದ್ದ ಜಾಗದಲ್ಲೀಗ ಆಧುನಿಕ ವಿನ್ಯಾಸದ ಬಹು ಮಹಡಿ ಕಟ್ಟಡ ಎದ್ದು ನಿಂತಿದೆ. ನಮ್ಮ ಹಳೆಯ ಹಂಚಿನ ಮನೆಯ ನೆನಪು ಹೃದಯದಲ್ಲೇ ಆಪ್ತವಾಗಿ ಉಳಿದಿದೆ. ಯಾವ ಕಾಲಕ್ಕಾದರೂ ಸರಿ, "ನೆನೆವುದೆನ್ನ ಮನಂ ನಮ್ಮ ವಠಾರ ಜೀವನಂ" ಎನ್ನುವ ಭಾವನೆ ಆಗಾಗ ಸುಳಿಯದೇ ಇರುವುದಿಲ್ಲ.


**ಆರತಿ ಘಟಿಕಾರ್**

ಮೂಲತಃ ಬೆಳಗಾವಿ ಜಿಲ್ಲೆಯವರು. ಹಾಸ್ಯ ಲೇಖನ, ಲಲಿತ ಪ್ರಬಂಧ, ಕವನ, ಹನಿಗವನಗಳನ್ನು ಬರೆಯುತ್ತ ಬಂದಿದ್ದಾರೆ.

ಪ್ರಕಟಿತ ಪುಸ್ತಕಗಳು: 'ಹನಿ ಹನಿ ಚಿತ್ತಾರ', 'ಭಾವದ ಹಕ್ಕಿ' (ಹನಿಗವನ ಸಂಕಲನಗಳು), 'ಮಾತ್ರೆ ದೇವೋ ಭವ', 'ವಠಾರ ಮೀಮಾಂಸೆ' (ಹಾಸ್ಯ ಪ್ರಬಂಧ ಸಂಕಲನಗಳು). ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.